SRUJANI

ISSN: 2583-3510

Indian Journal of Innovative Research and Development (SIJIRD)

Volume-1 (02), May-June 2022, Pp. 106-110
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಇತಿಹಾಸ ಮತ್ತು ಜಾನಪದ : ಕನ್ನಡದಲ್ಲಿ ನಡೆದ ಅಧ್ಯಯನ ಸಮೀಕ್ಷೆ

**ಡಾ. ಚಲುವರಾಜು***

*ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***

ಕನ್ನಡದಲ್ಲಿ ಇತಿಹಾಸ ಮತ್ತು ಜಾನಪದದ ನಡುವಿನ ಸಂಬಂಧದ ಕುರಿತು ಗಂಭೀರ ಅಧ್ಯಯನವೇನೂ ನಡೆದಂತಿಲ್ಲ. ಜೀ.ಶಂ.ಪರಮಶಿವಯ್ಯ (1975), ವಿವೇಕ ರೈ (1985), ಹಿ.ಶಿ.ರಾಮಚಂದ್ರೇಗೌಡ (1987), ಲಕ್ಷ್ಮಣ ತೆಲಗಾವಿ (1987), ಅರವಿಂದಮಾಲಗತ್ತಿ (1990), ಪಿ.ಕೆ.ರಾಜಶೇಖರ್ (1990) ಮತ್ತು ಎಸ್.ಎ. ಕೃಷ್ಣಯ್ಯ (1990) ನವರು ಬೇರೆ ಬೇರೆ ಸಂದರ್ಭದಲ್ಲಿ ಇತಿಹಾಸ ಮತ್ತು ಜಾನಪದದ ಸಂಬಂಧದ ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರೆ, ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು ಇತಿಹಾಸದ ಹೆಸರಿನಲ್ಲಿ ಜಾನಪದ ಮಾಹಿತಿಗಳನ್ನು ಕಲೆ ಹಾಕಿಕೊಟ್ಟಿದ್ದಾರೆ.

***Key Words:*** ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಇತಿಹಾಸ, ಜಾನಪದ.

**ಪೀಠಿಕೆ**

ಜೀ.ಶಂ.ಪರಮಶಿವಯ್ಯನವರು ತಮ್ಮ 'ಜಾನಪದ ಕೆಲವು ಮುಖಗಳು' (1975) ಕೃತಿಯಲ್ಲಿ 'ಇತಿಹಾಸ ಮತ್ತು ಜಾನಪದ'ದ ನಡುವಿನ ಸಂಬಂಧದ ಬಗೆಗೆ ಸೋದಾಹರಣವಾಗಿ ಚರ್ಚೆ ನಡೆಸಿದ್ದಾರೆ. ಅವರ ಪ್ರಕಾರ "ಆಧುನಿಕ ಶಾಸ್ತ್ರೀಯ ಕ್ರಮಗಳಲ್ಲಿ ಜಾನಪದ ಸಾಮಾಗ್ರಿಯನ್ನು ಉದ್ದೇಶಿತ ಇತಿಹಾಸದ ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ಜಾನಪದದಲ್ಲಿ ಇಂತಹ ಖಚಿತ ಆಧಾರಗಳು ಇರುವುದಿಲ್ಲವಾಗಿ ಇತಿಹಾಸಜ್ಞರನೇಕರು ಇದನ್ನು ನಿರ್ಲಕ್ಷಿಸುತ್ತಾರೆ. ದಾಖಲೆಗಳೆಂದು ಪರಿಗಣಿಸಲ್ಪಡುವ ಅನೇಕ ಸಾಮಾಗ್ರಿಗಳು ಕೆಲವೊಮ್ಮೆ ವಿಫಲವಾದ ನಿದರ್ಶನಗಳುಂಟು. ಜಾನಪದ ಅನೇಕ ಬಾರಿ ಐತಿಹಾಸಿಕ ದಾಖಲೆಗಳನ್ನು ಸ್ಥಿರಗೊಳಿಸುವಲ್ಲಿ ತನ್ನ ನೆರವು ನೀಡುತ್ತದೆ. ಎಷ್ಟೋ ಅಜ್ಞಾತ ಐತಿಹಾಸಿಕ ಘಟನೆಗಳು ಜಾನಪದದಿಂದ ಬೆಳಕಿಗೆ ಬರುವ ಸಾಧ್ಯತೆಯೂ ಉಂಟು" (1975:26–27) ತಮ್ಮ ವಾದಕ್ಕೆ ಪೂರಕವಾಗಿ ಅವರು ಪಿರಿಯಪಟ್ಟಣದ ಕಾಳಗವನ್ನು ಪ್ರಧಾನವಾಗಿ ಉದಾಹರಿಸುತ್ತಾರೆ. ಅದರ ಜೊತೆಗೆ ಕೆಲವು ಐತಿಹ್ಯಗಳು, ಗಾದೆ, ಒಗಟು ಮತ್ತಿತರ ಜಾನಪದ ಪ್ರಕಾರಗಳನ್ನು ಅವರು ಗಮನಿಸುತ್ತಾರೆ.

ವಿವೇಕ ರೈಯವರು ತಮ್ಮ ಆನ್ವಯಿಕ ಜಾನಪದ (1985) ಕೃತಿಯಲ್ಲಿರುವ ಇತಿಹಾಸ ಮತ್ತು ಜಾನಪದ ಎಂಬ ಲೇಖನದಲ್ಲಿ (ಪುಟ 68–81) ಅವರದು ಶಿಸ್ತುಗಳ ನಡುವಿನ ಸಂಬಂಧ ಸ್ವರೂಪದ ಬಗೆಗೆ ಅತ್ಯಂತ ಮಹತ್ವದ ಚರ್ಚೆ ನಡೆಸಿದ್ದಾರೆ. ಆ ಲೇಖನದಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಭಾರತದಂಥ ಬಹು ಅನಕ್ಷರಸ್ಥರಿರುವ ನಾಡಿನಲ್ಲಿ ಮೌಖಿಕ ಸಾಮಗ್ರಿಗಳಿಗಿರುವ ಮಹತ್ತ್ವವನ್ನು ವಿವರಿಸಿದ್ದಾರೆ. ಹೆಚ್ಚಿನ ಜನಸಾಮಾನ್ಯರ ಬದುಕಿನ ಚಿತ್ರಣವು ಭಾರತದ ಸಾಂಪ್ರದಾಯಿಕ ಇತಿಹಾಸಕಾರರ ಚರಿತ್ರೆಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಈ ಇತಿಹಾಸಕಾರರು ಕಂಠಸ್ಥ ಪರಂಪರೆಗೆ ಸೇರಿದ ಜನಪದ ಸಾಹಿತ್ಯವನ್ನು ತಮ್ಮ ಮಡಿವಂತಿಕೆಯ ಮನೋಧರ್ಮದಿಂದ ಅಸ್ಪೃಶ್ಯರೆಂಬಂತೆ ಕಂಡುದು ಮತ್ತು ಕೆಲವೊಂದು ಬಾರಿ ಇಂತಹ ಜನಪದ ಸಾಹಿತ್ಯದ ಮಹತ್ತ್ವದ ಬಗೆಗಿನ ಅಜ್ಞಾನ ಇವು ಈ ರೀತಿಯ ಧೋರಣೆಗೆ ಕಾರಣವಾಗಿತ್ತು (1985–65) ಎಂದು ವಿವೇಕ ರೈ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಎರಡನೆಯ ಭಾಗದಲ್ಲಿ ಕಂಠಸ್ಥ ಪರಂಪರೆಯನ್ನು ಇತಿಹಾಸ ರಚನೆಗೆ ಬಳಸಿಕೊಳ್ಳುವಾಗ ಆ ಲೇಖಕ ಎದುರಿಸಬೇಕಾದ ತೊಡಕುಗಳ ಬಗೆಗೆ ವಿಸ್ತೃತ ಚರ್ಚೆ ಇದೆ, ಮತ್ತು ಇದೇ

*Please cite this article as:* ಚಲುವರಾಜು. (2022). ಇತಿಹಾಸ ಮತ್ತು ಜಾನಪದ : ಕನ್ನಡದಲ್ಲಿ ನಡೆದ ಅಧ್ಯಯನ ಸಮೀಕ್ಷೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 106–110.

ಸಂದರ್ಭದಲ್ಲಿ ಅವರು ಮೌಖಿಕ ಸಾಮಗ್ರಿಗಳ ಬಳಕೆಯಲ್ಲಿ ಆತ ವಹಿಸಬೇಕಾದ ಎಚ್ಚರಿಕೆಯ ಬಗೆಗೂ ಉಪಯುಕ್ತವಾದ ಮಾತುಗಳನ್ನು ಹೇಳಿದ್ದಾರೆ. ಲೇಖನದ ಮೂರನೆ ಭಾಗ ಬಹಳ ಮಹತ್ತ್ವದ್ದಾಗಿದ್ದು, ಇದರಲ್ಲಿ ಡಾ. ರೈಯವರು ಕಾರ್ಕಳದ ಮತ್ತು ವೇಣೂರಿನ ಗೊಮ್ಮಟಮೂರ್ತಿಗಳ ಸ್ಥಾಪನೆಯ ಬಗೆಗೆ ಮೌಖಿಕ ಮತ್ತು ಲಿಖಿತ ಪರಂಪರೆಯಲ್ಲಿರುವ ಸಾಮಗ್ರಿಗಳನ್ನು ಸಂಗ್ರಹಿಸಿ ತೌಲನಿಕವಾಗಿ ವಿವೇಚಿಸಿದ್ದಾರೆ, ಮತ್ತು ಮೌಖಿಕ ಸಾಮಗ್ರಿಗಳು ಲಿಖಿತ ಸಾಮಗ್ರಿಗಳಿಗಿಂತ ಭಿನ್ನವಾದ ಸತ್ಯವನ್ನು ಹೇಗೆ ಪ್ರಕಟಿಸುತ್ತವೆ ಎಂಬುದನ್ನು ಸಾಧಾರಣವಾಗಿ ವಿವೇಚಿಸಿದ್ದಾರೆ. ಕೊನೆಯ ಭಾಗದಲ್ಲಿ ಜನಪದ ಆಶಯಗಳ ಹಿಂದಿರುವ ಐತಿಹಾಸಿಕ ಸತ್ಯದ ಕಡೆಗೆ ಗಮನ ಸೆಳೆಯುತ್ತ ಇತಿಹಾಸ ರಚನೆಯಲ್ಲಿ ಲಿಖಿತ ಪರಂಪರೆಯನ್ನೆ ಅವಲಂಬಿಸಿ ಬಹುಸಂಖ್ಯಾತ ಜನಸಮುದಾಯದ ಭಾವನೆಗಳನ್ನು ಸಂಪೂರ್ಣ ಕಡೆಗಣಿಸಿ ನಾವು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ನಮ್ಮ ಲಿಖಿತ ಇತಿಹಾಸಗಳನ್ನು ಸಂಪೂರ್ಣ ಕಡೆಗಣಿಸಿ ನಾವು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇನೆ. ನಮ್ಮ ಲಿಖಿತ ಇತಿಹಾಸಗಳು ಅಪರಿಪೂರ್ಣ, ಪಾರ್ಶ್ವಿಕ, ಅರ್ಧಸತ್ಯಗಳನ್ನು ಒಳಗೊಂಡ ಬಾಕಿ ಇತಿಹಾಸವಾಗಿ ಉಳಿದು ಬಂದಿರುವುದು ಇಂದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಕಂಠಸ್ಥ ಪರಂಪರೆಯ ಸಾಮಗ್ರಿಗಳಲ್ಲಿ ಕಾಲ್ಪನಿಕತೆ ಸೇರಿಕೊಂಡಿರಬಹುದು, ಘಟನೆಗಳು ಕಾಲದ ಅಂತರವನ್ನು ಮರೆತು ಒಂದಾಗಿರಬಹುದು, ವ್ಯಕ್ತಿಗಳ, ಸ್ಥಳಗಳ ಹೆಸರುಗಳು ವ್ಯತ್ಯಾಸಗೊಂಡಿರಬಹುದು, ಕಾಲದ ಬೆಳವಣಿಗೆಯ ಮೂಲ ತಿರುಳಿನ ಸುತ್ತ ಕವಚಗಳ ಪದರುಗಳನ್ನು ಸೇರಿಸಿರಬಹುದು. ಆದರೆ ಬಹು ಜನರ ನೋವು ನಲಿವುಗಳು ಆಸೆ ಅಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲಾಗಿ ಪ್ರಸರಿಸುತ್ತಾ ಇಂತಹ ಕಂಠಸ್ಥ ಪರಂಪರೆಯಾಗಿದೆ ಎನ್ನವುದನ್ನು ಮರೆಯಾಲಾಗದು. ಇಂಥ ಕಂಠಸ್ಥ ಪರಂಪರೆಯ ಸಾಮಗ್ರಿಗಳನ್ನು ಬಳಸಿಕೊಂಡು ಇತಿಹಾಸ ರಚನೆ ಮಾಡಿದಾಗ ಸಂಭವಿಸಬಹುದಾದ ತಪ್ಪುಗಳು ಲಿಖಿತ ಪರಂಪರೆಯ ಇತಿಹಾಸ ರಚನೆಯಲ್ಲಿ ಆಗಬಹುದಾದ ತಪ್ಪುಗಳಷ್ಟು ಘೋರವಾಗಿರುವುದಿಲ್ಲ ಎನ್ನುವುದನ್ನು ನಾವು ಮನಗಂಡಷ್ಟು ಒಳ್ಳೆಯದು (1985–80–81) ಎಂಬ ಖಚಿತ ತೀರ್ಮಾನಕ್ಕೆ ಬರುತ್ತಾರೆ. ಸ್ಪಷ್ಟವಾದ ಸೈದ್ಧಾಂತಿಕ ಗ್ರಹಿಕೆ, ಆಕರಗಳ ಸಮೃದ್ಧ ಬಳಕೆಯಿಂದಾಗಿ ಈ ಲೇಖನ ಅತ್ಯಂತ ಮಹತ್ತ್ವದ್ದಾಗಿದೆ.

ಹಿ.ಶಿ.ರಾಮಚಂದ್ರೇಗೌಡರ ಜಾನಪದ ಅಂತರಂಗ ಕೃತಿಯಲ್ಲಿ ಜನಪದ ಇತಿಹಾಸದ ಕುರಿತ ಲೇಖನವೊಂದಿದೆ. (1987–93) ಈ ಲೇಖನದಲ್ಲಿ ಡಾ.ಗೌಡರು ಜನಪದ ಇತಿಹಾಸ ಮತ್ತು ಜಾನಪದದಲ್ಲಿ ಐತಿಹಾಸಿಕ ದಾಖಲೆಗಳ ನಿರೂಪಣೆಗಳೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಜನಪದ ಇತಿಹಾಸವನ್ನು ಬರೆಯುವ ಕೆಲಸವನ್ನು ಅವರು ಚಾರಿತ್ರಿಕ ಜಾನಪದ ವಿದ್ವಾಂಸನಿಗೆ ಒಪ್ಪಿಸಿದರೆ, ಎರಡನೆಯದನ್ನು ಚರಿತ್ರೆಕಾರನಿಗೆ ಒಪ್ಪಿಸುತ್ತಾರೆ. ಈ ನೆಲೆಯಿಂದ ಹೊರಡುವ ಅವರು ಜನಪದ ಇತಿಹಾಸವನ್ನು ಬರೆಯಬೇಕಾದರೆ ರೀತಿ ನೀತಿಯ ಬಗೆಗೆ ದಾಖಲೆಗಳನ್ನು ಕೊಡುತ್ತ ಹೋಗುತ್ತಾರೆ. ಮೌಖಿಕ ಇತಿಹಾಸದ ಸ್ವರೂಪದ ಬಗೆಗೆ ಅವರ ನಿಲುವು ಇಂತಿದೆ "ಜನಪದ ಇತಿಹಾಸ ಇಲ್ಲಿಯವರೆಗೆ ಯಾರೂ ಬರೆದಿಡದೆ ಉಳಿದು ಬಂದಿದೆ. ಅದು ಉಳಿದು ಬರಲು ಜನಪದ ಐತಿಹಾಸಿಕ ಪ್ರಜ್ಞೆ ಕಾರಣ. ಈಗ ನಾವು ಆ ಪ್ರಜ್ಞೆಯ ರಚನೆ ಶೋಧಿಸಬೇಕು. ಈಗ ಇತಿಹಾಸವನ್ನು ಜನಪದರು ಪುರಾಣ ಮಾಡುತ್ತಾರೆ, ಐತಿಹ್ಯ ಮಾಡುತ್ತಾರೆ, ಅಥವಾ ಕಟ್ಟುಕತೆ ಮಾಡುತ್ತಾರೆ, ಎನ್ನುವ ಸರಳ ಮಾತುಗಳಿಗಿಂತ ಹಾಗೆ ಮಾಡಲು ಕಾರಣವೇನು? ಎಂಬುದು ಜನಪದ ಇತಿಹಾಸಕಾರನ ಶೋಧನೆಯಾಗಬೇಕು. ಜನಪದ ಇತಿಹಾಸ ಉಳಿದು ಬರಲು ಇಂತಹ ಕಲ್ಪಿತ ಮಾರ್ಗಗಳೇ ಅವರಿಗೆ ಏಕೆ ಬೇಕಾಗುತ್ತವೆ ಎಂಬುದೂ ಕೂಡ ವಿಚಾರ ಮಾಡಬೇಕಾದ ಪ್ರಶ್ನೆ" (1987:86). ರಾಮಚಂದ್ರೇಗೌಡರು ಜನಪದ ಇತಿಹಾಸದ ಪ್ರತ್ಯೇಕ ರೂಪದ ಕುರಿತು ಚಿಂತನೆ ನಡೆಸಿದ್ದಾರೆ. ತಮ್ಮ ಸೈದ್ಧಾಂತಿಕ ನೆಲೆಗಳನ್ನು ಅವರು ಸೋಹಾರಣವಾಗಿ ಸಮರ್ಥಿಸಿಕೊಂಡಿಲ್ಲವಾದರೂ, ಅವರ ಚಿಂತನೆಯ ನೆಲೆಗಳು ಭಿನ್ನವಾಗಿವೆ ಮತ್ತು ಅಧ್ಯಯನ ಯೋಗ್ಯವಾಗಿವೆ.

ಲಕ್ಷ್ಮಣ ತೆಲಗಾವಿ ಅವರ "ಜನಪದ ವೀರ ಸಾಹಿತ್ಯ: ಚಾರಿತ್ರಿಕ ವಿವೇಚನೆ" (1987) ಎಂಬ ಸುದೀರ್ಘ ಲೇಕನದಲ್ಲಿ ಜಾನಪದ ಮಾಹಿತಿಗಳನ್ನು ಚರಿತ್ರೆಯ ಪುನರ್ ನಿರ್ಮಾಣಕ್ಕೆ ಬಳಸಿಕೊಳ್ಳಲು ಮಾಡಿದ ಪ್ರಾಮಾಣಿಕ ಪ್ರಯತ್ನವಿದೆ. ತೆಲಗಾವಿಯವರು ಜಾನಪದದಲ್ಲಿ ಹುದುಗಿಕೊಂಡಿರುವ ಚಾರಿತ್ರಿಕ ಅಂಶಗಳನ್ನು ಬೆದಕಿ ತೆಗೆದಿದ್ದಾರೆ. ಜೊತೆಗೆ ಇಂಥ ಕೆಲಸಗಳ ಹಿಂದೆ ಅಪಾರ ಶ್ರಮವಿದೆ ಎಂಬುದನ್ನು ಅವರು ಎಚ್ಚರದಿಂದ ಗುರುತಿಸುತ್ತಾರೆ. ಅವರು ಹೇಳುವ ಮಾತುಗಳು "ಜನಪದ ಸಾಹಿತ್ಯವನ್ನೇ ಮುಖ್ಯ ಆಕರವಾಗಿರಿಸಿಕೊಂಡು ಇಂತಹ ಅಂಶಗಳ ಅಧ್ಯಯನಕ್ಕೆ ತೊಡಗುವಾಗ ಜಾನಪದ ವಿದ್ವಾಂಸನಾಗಲೀ ಇತಿಹಾಸ ಪಂಡಿತನಾಗಲೀ ಅನುಸರಿಸಬೇಕಾದ ಸೂತ್ರಗಳು ತೀರ ಜಟಿಲವಾಗಿರುತ್ತವೆನ್ನಬೇಕಾಗುತ್ತದೆ" (1987:9). ಈ ಅರಿವಿನಲ್ಲಿ ಅವರು ಕುಮಾರರಾಮ, ಚಿತ್ರದುರ್ಗದ ಮದಕರಿ ನಾಯಕ, ಮತ್ತಿ ತಿಮ್ಮಣ್ಣ ನಾಯಕ, ಒನಕೆ ಓಬವ್ವ, ಸಿರಾದ ರಂಗಪ್ಪ ನಾಯಕ, ತರೀಕೆರೆಯ ಸರ್ಜಪ್ಪನಾಯಕ, ಮಾಗಡಿ ಕೆಂಪೇಗೌಡ, ಪಿರಿಯಮಾಪಟ್ಟಣದ ವೀರರಾಜ, ಕೊಡಗಿನ ಲಿಂಗರಾಜ, ಔಗೂರಿನ ವೆಂಕಟಾದ್ರಿ ಭೂಪ, ಶ್ರೀರಂಗಪಟ್ಟಣದ ಟಿಪ್ಪುಸುಲ್ತಾನ್, ಕಿತ್ತೂರ ಚೆನ್ನಮ್ಮ,

ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಹಲಗಲಿಯ ಬೇಡರು ಮೊದಲಾದವರ ಬಗ್ಗೆ ಲಭ್ಯ ಇರುವ ಜನಪದ ಸಾಹಿತ್ಯವನ್ನೆಲ್ಲ ವಿಶ್ಲೇಷಿಸಿದ್ದಾರೆ. ಲಕ್ಷ್ಮಣ ತೆಲಗಾವಿಯವರು ಅಧ್ಯಯನಕ್ಕೆ ಆಯ್ದುಕೊಂಡ ಸಾಹಿತ್ಯ ಪಠ್ಯಗಳೆಲ್ಲವೂ ಈಗಾಗಲೇ ನಮಗೆ ತಿಳಿದಿರುವ ಐತಿಹಾಸಿಕ ವ್ಯಕ್ತಿಗಳ ಕುರಿತು ಹೊಸ ಮಾಹಿತಿ ನೀಡುವಂಥವು. ಸ್ವತಃ ಚರಿತ್ರೆಯ ವಿದ್ಯಾರ್ಥಿಯಾಗಿರುವ ತೆಲಗಾವಿಯವರು, ಈ ಪಠ್ಯಗಳ ಮೂಲಕ ಚರಿತ್ರೆಯ ಕೆಲವು ಗ್ರಹಿಕೆಗಳನ್ನು ಪರಿಷ್ಕರಿಸಿಕೊಂಡಿದ್ದಾರೆ. ಆ ಮೂಲಕ ಚರಿತ್ರೆ ಮತ್ತು ಜಾನಪದದ ನಡುವೆ ಹೊಸ ಸಂಬಂಧವೊಂದರ ಏರ್ಪಡುವಿಕೆಗೆ ಕಾರಣರಾಗಿದ್ದಾರೆ. ಚಾರಿತ್ರಿಕ ವ್ಯಕ್ತಿಗಳ ಉಲ್ಲೇಖವೇ ಇಲ್ಲದ ಜನಪದ ಸಾಹಿತ್ಯವನ್ನು ತೆಲಗಾವಿಯವರು ಹೇಗೆ ವಿಶ್ಲೇಷಿಸುತ್ತಾರೆ ಎಂಬುದನ್ನು ಇಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಉದಾಹರಣೆಗೆ ಕೊರಗತನಿಯನ ಪಾಡ್ದನವನ್ನು ಗಮನಿಸಬೇಕು. ಕೊರಗತನಿಯ ಎಂಬವನೊಬ್ಬ ಇದ್ದ ಎಂಬುದಕ್ಕೆ ನಮ್ಮಲ್ಲಿ ಪಾಡ್ದನ ಬಿಟ್ಟರೆ ಬೇರಾವ ಆಧಾರವೂ ಇಲ್ಲ. ಇಂಥ ಸಂದರ್ಭದಲ್ಲಿ ಪಾಡ್ದನ ನೀಡುವ ಮಾಹಿತಿಗಳನ್ನು ಚರಿತ್ರೆಯ ನಿರ್ಮಾಣಕ್ಕೆ ಹೇಗೆ ಬಳಸಿಕೊಳ್ಳಬಹುದು? ಅಥವಾ ಪಾಡ್ದನಗಳ ಮೂಲಕ ನಾವು ನಿರ್ಮಿಸಬಯಸುವ ಚರಿತ್ರೆ ಹೇಗಿರುತ್ತದೆ? ಹೇರಳವಾಗಿರುವ ಜನಪದ ಕಥೆಗಳಲ್ಲಿ ಇತಿಹಾಸಕ್ಕೆ ಅಗತ್ಯವಾಗಿರುವ ಕಾಲ, ದೇಶ ಮತ್ತು ವ್ಯಕ್ತಿಗಳ ಉಲ್ಲೇಖವೇ ಇರುವುದಿಲ್ಲ. ಹೀಗಿರುವಾಗ ಜನಪದ ಕಥೆಗಳ ಮೂಲಕ ಸಾಮಾಜಿಕ ಚರಿತ್ರೆಯೊಂದನ್ನು ಕಟ್ಟಲಾದೀತೆ? ಇಂಥಲ್ಲಿ ಚರಿತ್ರೆಕಾರ ಎದುರಿಸುವ ಸಮಸ್ಯೆಗಳೇನು? ಈ ಬಗೆಯ ಪ್ರಶ್ನೆಗಳಿಗೆ ತೆಲಗಾವಿಯವರ ಲೇಖನದಲ್ಲಿ ಉತ್ತರ ದೊರಕುವುದಿಲ್ಲ. ಅವರದ್ದು ಏನಿದ್ದರೂ ಈಗಾಗಲೇ ಇರುವ ಚರಿತ್ರೆಯೊಂದಕ್ಕೆ ಇನ್ನಷ್ಟು ಮಾಹಿತಿಗಳನ್ನು ಒದಗಿಸಿಕೊಳ್ಳುವ ಕೆಲಸವಾಗಿದೆ. ಇಂಥ ಕೆಲಸಗಳ ಉಪಯುಕ್ತತೆಯ ಬಗ್ಗೆ ಎರಡು ಮಾತಿಲ್ಲ. ಆದರೆ ನಮಗೆ ಇಷ್ಟೇ ಸಾಕಾಗುವುದಿಲ್ಲ.

ಅರವಿಂದ ಮಾಲಗತ್ತಿಯವರು 'ಇತಿಹಾಸ ಮತ್ತು ಜನಪದ ಸಾಹಿತ್ಯ' ಎಂಬ ಒಂದು ಲೇಖನ ಬರೆದಿದ್ದಾರೆ (1990:39–57). ಈ ಲೇಖನದಲ್ಲಿ ಅವರು ಜನಪದ ಸಾಹಿತ್ಯವನ್ನು ಇತಿಹಾಸಕ್ಕೆ ಬಳಸಿಕೊಳ್ಳುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತು ವಿಸ್ತೃತ ಚರ್ಚೆ ನಡೆಸಿದ್ದಾರೆ. ಅವರು ಐದು ಸಮಸ್ಯೆಗಳನ್ನು ಪಟ್ಟಿ ಮಾಡುತ್ತಾರೆ.

1. "ಒಂದು ಐತಿಹಾಸಿಕ ಘಟನೆ ಜಾನಪದದ ಬೇರೆ ಬೇರೆ ಪ್ರಕಾರಗಳಲ್ಲಿಯೇ ಲಭ್ಯವಾಗುವುದು ಮತ್ತು ಜನಪದ ಸಾಹಿತ್ಯದಲ್ಲಿಯೇ ಕಥನ ಗೀತೆಯ ಒಂದು ಪ್ರಕಾರ ಆಯ್ದುಕೊಂಡಾಗ ಅದೇ ಐತಿಹಾಸಿಕ ಘಟನೆಯ ಸಂಗತಿಗಳು ಪಾಠಾಂತರಗಳೊಂದಿಗೆ ಲಭ್ಯವಾಗುವುದು."
2. "ಕಂಠಸ್ಥ ಪರಂಪರೆಯ ಒಂದು ಐತಿಹಾಸಿಕ ಕೃತಿಯಲ್ಲಿ ಲಭ್ಯವಾಗುವ ಎಲ್ಲ ಆಕರಗಳೂ ಐತಿಹಾಸಿಕ ಸತ್ಯಸಂಗತಿಗಳೆಂದು ಹೇಳಲಾಗದಿರುವುದು ಮತ್ತು ಕಾಲ್ಪನಿಕ ಗುಣ ಗುರುತಿಸಲಾಗದಂತೆ ಸೇರಿಕೊಂಡಿರುವುದು."
3. "ಒಂದು ಐತಿಹಾಸಿಕ ಘಟನೆಯೊಂದಿಗೆ, ಇನ್ನೊಂದು ಐತಿಹಾಸಿಕ ಘಟನೆ ಬಂದು ಸೇರ್ಪಡೆಯಾಗುವುದು ಇಲ್ಲವೆ ಆ ಘಟನೆ ಬೇರೆ ಕಡೆಗಳಲ್ಲಿ ಘಟಿಸಿದ ಎಂಬಂತೆ ಪ್ರಾದೇಶಿಕ ಗುಣಗಳೊಂದಿಗೆ ವ್ಯಕ್ತವಾಗುವುದು."
4. "ಜನಪದ ಸಾಹಿತ್ಯ ನಾಲಿಗೆಯಿಂದ ನಾಲಿಗೆಗೆ ಹರಿದುಬರುವುದರಿಂದ ಮತ್ತು ಐತಿಹಾಸಿಕ ಘಟನೆಗಳು ತೀವ್ರ ಪ್ರಸರಣ ಹೊಂದುವುದರೊಂದಿಗೆ ಬದಲಾವಣೆ ಶಕ್ತಿಯನ್ನು ಪಡೆದುಕೊಂಡಿರುವುದು."
5. "ಲಿಖಿತ ಸಾಮಗ್ರಿ ಮತ್ತು ಕಂಠಸ್ಥ ಸಾಮಗ್ರಿಗಳಲ್ಲಿ ಪರಸ್ಪರ ಸಾಮ್ಯ ವೈಷಮ್ಯಗಳಿರುವುದು" (ಪುಟ.43).

ತಮ್ಮ ವಾದಕ್ಕೆ ಪೂರಕವಾಗಿ ಅವರು ಚಪ್ಪಲಿ ಹೊಲಿದವನ ಕುರಿತ ಕಥೆ ಮತ್ತು ಐತಿಹ್ಯಗಳನ್ನು ವಿಶ್ಲೇಷಿಸಿದ್ದಾರೆ. ಆ ಮೂಲಕ ಮೌಲ್ಯಮಾಪನಕ್ಕೆ ಬೇಕಾದ ಕೆಲವು ಸೂತ್ರಗಳನ್ನು ಮುಂದಿಟ್ಟಿದ್ದಾರೆ. ಇಷ್ಟಿದ್ದರೂ ಪರಿಶುದ್ಧವಾದ ಇತಿಹಾಸ ರಚಿಸಲು ಸಾಧ್ಯವಿಲ್ಲ ಎಂಬ ನಿಲುವಿಗೆ ಅವರು ಬರುತ್ತಾರೆ. ಉಪಲಬ್ಧ ಸಾಮಗ್ರಿಗಳಿಂದ ಸ್ಥೂಲ ಇತಿಹಾಸವೊಂದನ್ನು ಹೇಗೆ ನಿರೂಪಿಸಬಹುದೆಂಬುದಕ್ಕೆ ಡಾ. ಮಾಲಗತ್ತಿಯವರ ಲೇಖನ ಉತ್ತಮ ಉದಾಹರಣೆಯಾಗಿದೆ.

ಪಿ.ಕೆ.ರಾಜಶೇಖರರವರು ತಮ್ಮ ಪಿರಿಯಾಪಟ್ಟಣದ ಕಾಳಗ (1990) ಕೃತಿಯಲ್ಲಿ ಮೊದಲ ಬಾರಿಗೆ ಜಾನಪದ ಆಕರವನ್ನು ಇತಿಹಾಸ ರಚನೆಗೆ ಬಳಸಿಕೊಳ್ಳುವ ಸಾಹಸ ಮಾಡಿದ್ದಾರೆ. ಕೃತಿಗೆ ಬರೆದ ದೀರ್ಘ 1 ಪ್ರಸ್ತಾವನೆಯಲ್ಲಿ ರಾಜಶೇಖರರವರು ಲಿಖಿತ ಆಕರಗಳ ಮೂಲಕ ಸೃಷ್ಟಿಯಾದ ಚರಿತ್ರೆಯನ್ನು ಸುದೀರ್ಘವಾಗಿ ವಿವರಿಸಿ ಕೊನೆಯಲ್ಲಿ ಜಾನಪದ ಆಕರಗಳನ್ನು ಅದಕ್ಕೆ ಪೂರಕ ಸಾಮಗ್ರಿಯಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಚರಿತ್ರೆಯ ಬಗೆಗೆ ಒಂದು ಕಲ್ಪನೆ ಮೊದಲೇ ಮೂಡಿರುತ್ತದೆ. ಮತ್ತು ಅದನ್ನು ಗಟ್ಟಿಗೊಳಿಸಲು ಜಾನಪದ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಪ್ರಸ್ತಾವನೆಯಲ್ಲಿ ಅವರು ಹೇಳುವ ಮಾತುಗಳು ಇಂತಿವೆ. "ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಜನಪದ

ವೀರಕಾವ್ಯಗಳಲ್ಲಿ ಕೆಲವು ಐತಿಹಾಸಿಕ ವಿಚಾರಗಳಿರಬಹುದೇ ಹೊರತು ಜನಪದ ವೀರಕಾವ್ಯಗಳೆಂದರೆ ಅದು ಪರಿಪೂರ್ಣವಾಗಿ ಇತಿಹಾಸವಲ್ಲ ಎಂಬುದು. ಇದಕ್ಕೆ ಹಿನ್ನೆಲೆಯಾಗಿ ಹೇಳುವ ಜನಪದ ಗಾಯಕರ ಕಥೆಗಳು ಒಮ್ಮತವಾಗಿಲ್ಲ. ಆದ್ದರಿಂದ ಹೀಗೆ ಹೇಳಬಹುದು ಯುದ್ಧ ನಡೆದುದೊಂದೆ ಐತಿಹಾಸಿಕವಾಗಿ ನಮಗೆ ತಿಳಿದು ಬರುತ್ತಿರುವ ಸತ್ಯಸಂಗತಿ, ಉಳಿದವುಗಳ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಲಾಗುತ್ತಿಲ್ಲ." (1990:38-39) ಇಲ್ಲಿ ಲಿಖಿತ ಆಕರಗಳ ಮೂಲಕ ಸೃಷ್ಟಿಯಾದ ಚರಿತ್ರೆಯನ್ನು 'ನಿಜ' ಎಂದು ನಂಬಲಾಗಿದೆ ಮತ್ತು ಜಾನಪದ ಆಕರಗಳನ್ನು ಆ 'ನಿಜ'ದ ಸಾಕ್ಷಾತ್ಕಾರವಾಗಿ ಬಳಸಿಕೊಳ್ಳಲಾಗಿದೆ. ಅವರ ಪ್ರಕಾರ ನಿರ್ದಿಷ್ಟವಾಗಿ ಹೇಳಬಹುದಾದದ್ದು ಮಾತ್ರ ಸತ್ಯ. ಉಳಿದವು ಅಲ್ಲ.

ಎಸ್.ಎ.ಕೃಷ್ಣಯ್ಯನವರು ಸಂಪಾದಿಸಿದ 'ಬಾಚಿಗೊಂಡನಹಳ್ಳಿ ಮತ್ತು ಏಣಗಿಬಸಾಪುರದ ಜನಪದ ಗೀತೆಗಳು' ಸಂಕಲನದ ಮುನ್ನುಡಿಯಲ್ಲಿ ಕೃಷ್ಣಯ್ಯನವರು ಮೌಖಿಕ ಸಾಹಿತ್ಯ ಮತ್ತು ಚರಿತ್ರೆ ಕುರಿತು ಚರ್ಚೆ ನಡೆಸಿದ್ದಾರೆ. 'ರಾಯಚೂರು ಕೋಟೆ' ಎಂಬ ಹಾಡನ್ನು ಆಧರಿಸಿಕೊಂಡು ಕೃಷ್ಣಯ್ಯನವರು ಚರಿತ್ರೆ ಮತ್ತು ಮೌಖಿಕ ಸಾಹಿತ್ಯದ ಸಂಬಂಧ ಕುರಿತು ವಿಶ್ಲೇಷಣೆ ನಡೆಸಿದ್ದಾರೆ. ಕೃಷ್ಣಯ್ಯನವರು ಪಿ.ಕೆ.ರಾಜಶೇಖರರ ಹಾಗೆ ಈಗಾಗಲೇ ಸಿದ್ಧವಾಗಿರುವ ಚರಿತ್ರೆಯ ಕಲ್ಪನೆಗೆ ಜಾನಪದದಿಂದ ದೊರೆತ ಮಾಹಿತಿಗಳನ್ನು ಜೋಡಿಸುತ್ತಾ ಹೋಗುತ್ತಾರೆ. ಮೌಖಿಕ ಸಾಮಗ್ರಿಗಳಿಗೆ ಕೋಟೆ ಕೊತ್ತಲಗಳ ಪುರಾವೆಗಳು ದೊರೆತಾಗ ಮಾತ್ರ ಅದನ್ನು ಅಧಿಕೃತವೆಂದು ಅಲ್ಲಿ ಮಾನ್ಯಮಾಡುತ್ತಾರೆ. ಭೊಸ್ಸರೆಡ್ಡಿಯ ಬಗೆಗೆ ಅವರು ನಡೆಸಿದ ಚರ್ಚೆಯನ್ನು ಗಮನಿಸಬೇಕು. ಶಾಸನದಲ್ಲಿ ಉಲ್ಲೇಖಿಸಲಾದ ಗೋನ ಗೋನಯ್ಯ ರೆಡ್ಡಿಯನ್ನು ಜನಪದರು ಮೌಖಿಕ ರೂಪದಲ್ಲಿ ಬೊಸ್ಸಾರೆಡ್ಡಿ ಎಂದು ಯಾಕೆ ಕರೆದರು ಎಂಬ ಪ್ರಶ್ನೆಯನ್ನು ಅವರು ಎತ್ತಿಕೊಳ್ಳುವುದಿಲ್ಲ.

ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು ಬರೆದ 'ಶ್ರೀ ಪಂಪಾಮಹಾತ್ಮೆ' (1983) ಎಂಬ 832 ಪುಟಗಳ ಬೃಹತ್ ಕೃತಿಯಲ್ಲಿ ಹಂಪಿಯ ಬಗೆಗಿನ ಜಾನಪದ ಮಾಹಿತಿಗಳನೇಕವನ್ನು ಸಂಗ್ರಹಿಸಿ ಕೊಡಲಾಗಿದೆ. ವಿರೂಪಾಕ್ಷ ಪಂಪಾದೇವಿಯರ ಮದುವೆ, ಋಷ್ಯ ಶೃಂಗರ ಕಥೆ, ಕಿನ್ನರೇಶ್ವರ ಕಥೆ, ತಾರಾಪರ್ವತ ಮಹಿಮೆ, ಹೇಮಕೂಟ ದರ್ಶನ, ಜಂಬುನಾಥ ಮೊದಲಾದವುಗಳ ಬಗೆಗಿನ ಪೌರಾಣಿಕ ಕಥೆಗಳನ್ನು ಲೇಖಕರು ಸಂಗ್ರಹಿಸಿ ಕೊಟ್ಟಿದ್ದಾರೆ, ಮತ್ತು ಅನೇಕ ಬಾರಿ ಕಥೆಯನ್ನು ತರ್ಕಬದ್ಧವಾಗಿ ಇತಿಹಾಸವೆಂಬಂತೆ ನೇಯ್ದಿದ್ದಾರೆ, ಸಪ್ತರ್ಷಿಗಳು ಪಂಪಾಕ್ಷೇತ್ರದ ಮಹಿಮೆ ತಿಳಿಯಲು ಹಂಪಿಗೆ ಬಂದಂತೆ ಕಲ್ಪಿಸಿ, ಸಪ್ತರ್ಷಿಗಳಿಗೆ ಹಂಪಿಯ ಕಥೆ ಹೇಳುವ ನಿರೂಪಣೆಯ ರೀತಿ ಇಲ್ಲಿಯದು. ಭೌತಿಕ ಸಾಮಗ್ರಿಗಳ ಆಧಾರದ ಮೇಲೆ ಇಲ್ಲಿ ಪುರಾಣ ರೀತಿಯ ಕಥನವನ್ನು ಕಟ್ಟಲಾಗಿದೆ. ಹೀಗೆ ಆದುದರಿಂದ ಈ ನಿರೂಪಣೆಯಲ್ಲಿ ಇತಿಹಾಸ ಪ್ರಜ್ಞೆ ಹಿಂದೆ ಸರಿದು ಕಲ್ಪನಾ ಪ್ರಜ್ಞೆ ವಿಜೃಂಭಿಸಿದೆ. ಇತಿಹಾಸವು ಇಲ್ಲಿ ಸಾರ್ವತ್ರಿಕ ಪ್ರತೀಕಗಳಾಗಿ ಮಾರ್ಪಟ್ಟಿದೆ. ಸ್ಥಳ, ವ್ಯಕ್ತಿ ಮತ್ತು ಕಾಲದ ಬದ್ಧತೆಯನ್ನು ಇಲ್ಲಿ ಮೀರಲಾಗಿದೆ. ಕೃತಿಯುದ್ದಕ್ಕೂ ಬಗೆ ಬಗೆಯ ಸ್ವಪ್ನ ಪ್ರತೀಕಗಳು ಕಾಣಿಸಿಕೊಂಡಿವೆ. ಹೀಗಾಗಿ ಈ ಕೃತಿಯನ್ನು ಐತಿಹಾಸಿಕ ಕೃತಿ ಎನ್ನುವಂತಿಲ್ಲ. ಆದರೆ ಇತಿಹಾಸ ರಚನೆಗೆ ಬೇಕಾದ ಪುರಾಣ ಸಾಮಗ್ರಿಗಳನ್ನು ಈ ಕೃತಿ ಒದಗಿಸಿಕೊಡುತ್ತದೆ.

ಹೀಗೆ ಹಲವು ವಿದ್ವಾಂಸರು ಇತಿಹಾಸ ಮತ್ತು ಜಾನಪದದ ನಡುವಿನ ಸಂಬಂಧದ ಕುರಿತು ಚರ್ಚಿಸಿದ್ದಾರೆ. ಇವರಲ್ಲಿ ವಿವೇಕ ರೈ ಮತ್ತು ರಾಮಚಂದ್ರೇಗೌಡರು ಒಂದು ಬಗೆಯ ಚಿಂತನಾ ವಿಧಾನವನ್ನು ಪ್ರಕಟಿಸಿದರೆ, ಜೀ.ಶಂ.ಪರಮಶಿವಯ್ಯ, ಪಿ.ಕೆ.ರಾಜಶೇಖರ, ಲಕ್ಷ್ಮಣ್ ತೆಲಗಾವಿ, ಅರವಿಂದ ಮಾಲಗತ್ತಿ ಮತ್ತು ಎಸ್.ಎ.ಕೃಷ್ಣಯ್ಯನವರು ಇನ್ನೊಂದು ಬಗೆಯ ಚಿಂತನೆಯನ್ನು ಪ್ರಕಟಿಸಿದ್ದಾರೆ.

ವಿವೇಕ ರೈ ಮತ್ತು ರಾಮಚಂದ್ರೇಗೌಡರು ಜಾನಪದ ಮತ್ತು ಇತಿಹಾಸದ ಸ್ವರೂಪ ಮತ್ತು ವಿಧಾನಗಳನ್ನು ಲಿಖಿತ ಇತಿಹಾಸದ ಸ್ವರೂಪ ಮತ್ತು ವಿಧಾನಗಳಿಂದ ಬೇರೆಯೇ ಆಗಿ ಗ್ರಹಿಸುತ್ತಾರೆ. ಜಾನಪದ ಇತಿಹಾಸವು ಸೈದ್ಧಾಂತಿಕವಾಗಿ ಭಿನ್ನವಾಗಿರುವುದರಿಂದ, ಅವುಗಳನ್ನು ಲಿಖಿತ ಇತಿಹಾಸದೊಂದಿಗೆ ಹೋಲಿಸಿ ನೋಡಬಾರದೆಂಬ ನಿಲುವು ಇವರದು. ಹೀಗಾಗಿ ಜಾನಪದದಲ್ಲಿ ನಿರ್ದಿಷ್ಟ ಉಲ್ಲೇಖಗಳಾಗಲೀ ಘಟನೆಗಳ ಕಾಲಾನುಕ್ರಮ ನಿರೂಪಣೆಯಾಗಲಿ ಸಿಗದೇ ಇದ್ದಾಗ ಇವರು ವಿಚಲಿತರಾಗುವುದಿಲ್ಲ. ಬದಲಾಗಿ ಅಂಥ ಸಂದರ್ಭಗಳು ಯಾಕಾಗಿ ಸೃಷ್ಟಿಯಾಗುತ್ತವೆ ಎಂದು ಅವರು ಕೇಳಿಕೊಳ್ಳುತ್ತಾರೆ. ಇವರಿಬ್ಬರ ಚಿಂತನಾಕ್ರಮ ಹೆಚ್ಚು ಆಧುನಿಕವಾದುದು.

ಜೀ.ಸಂ.ಪರಮಶಿವಯ್ಯ, ಪಿ.ಕೆ.ರಾಜಶೇಖರ, ಅರವಿಂದ ಮಾಲಗತ್ತಿ, ಲಕ್ಷ್ಮಣತೆಲಗಾವಿ ಮತ್ತು ಎಸ್.ಎ.ಕೃಷ್ಣಯ್ಯನವರ ಕಣ್ಣ ಮುಂದೆ ಈಗಾಗಲೇ ಸಿದ್ಧಗೊಂಡ ಚರಿತ್ರೆಯ ಕಲ್ಪನೆಯೊಂದಿದೆ. ಅದಕ್ಕೆ ಪೂರಕವಾದ ಸಾಮಗ್ರಿಗಳು ಜಾನಪದದಲ್ಲಿ ಸಿಕ್ಕಿದಾಗ ಅವರು ಸಂಭ್ರಮಗೊಳ್ಳುತ್ತಾರೆ. ಅಂದರೆ ಜನಪದ ಇತಿಹಾಸದ ಅಧ್ಯಯನದ ವಿಧಿ-ವಿಧಾನಗಳಲ್ಲಿ ಇವರು ಲಿಖಿತ ಇತಿಹಾಸದಿಂದಲೇ ನಿಷ್ಪನ್ನಗೊಳಿಸಿಕೊಂಡಿದ್ದಾರೆ ಎಂದೇ ಅರ್ಥ. ಈ ಕ್ರಮ

ಸಾಂಪ್ರದಾಯಕವಾದುದು ಮಾತ್ರವಲ್ಲ ಚರ್ಚಾಸ್ಪದವಾದುದು. ಏಕೆಂದರೆ ಈ ವಿಧಾನವನ್ನು ಅನುಸರಿಸಿಕೊಂಡು ಹೊರಟರೆ ಜನಪದ ಇತಿಹಾಸದ ಅನನ್ಯತೆಯೇ ನಷ್ಟವಾಗಿ ಬಿಡುತ್ತದೆ. ಇಷ್ಟಿದ್ದರೂ ಈ ವಿದ್ವಾಂಸರಿಗೆ ಜಾನಪದ ಸಾಮಗ್ರಿಗಳನ್ನು ಅಲಕ್ಷಿಸುವುದರಿಂದ ಉಂಟಾಗಬಹುದಾದ ನಷ್ಟದ ಬಗೆಗೆ ಒಂದು ಕಲ್ಪನೆಯಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅರವಿಂದ ಮಾಲಗತ್ತಿ. (1990). *ಇತಿಹಾಸ ಮತ್ತು ಜನಪದ ಸಾಹಿತ್ಯ.*
- ಲಕ್ಷ್ಮಣ ತೆಲಗಾವಿ. (1987). *ಜನಪದ ವೀರ ಸಾಹಿತ್ಯ: ಚಾರಿತ್ರಿಕ ವಿವೇಚನೆ.*
- ರಾಜಶೇಖರ ಪಿ.ಕೆ. (1990). *ಪಿರಿಯಾಪಟ್ಟಣದ ಕಾಳಗ.* ಚೇತನ ಬುಕ್‌ಹೌಸ್.
- ರಾಮಚಂದ್ರೇಗೌಡ ಹಿ.ಶಿ. (1987). *ಜಾನಪದ ಅಂತರಂಗ.*
- ಪರಮಶಿವಯ್ಯ ಜೀ.ಶಂ. (1975). *ಜಾನಪದ ಕೆಲವು ಮುಖಗಳು.* ಚೇತನ ಬುಕ್‌ಹೌಸ್.
- ವಿವೇಕ ರೈ, ಬಿ. ಎ. (1985). *ಅನ್ವಯಿಕ ಜಾನಪದ.* ಕನ್ನಡ ಪುಸ್ತಕ ಪ್ರಾಧಿಕಾರ.